

# ನೀನು ನೀನಾಗಿ

ಸ್ಪರ್ಶವೇ ಅಸಾಧ್ಯವಿದ್ದಾಗ
ಮೀನು ನೀರೊಳಗೆ ಚುಳುಕಿ ಹಾಯುವ ಹಾಗೆ
ನನ್ನನ್ನು ನೀನು ಹಾದು ಹೋದೆ

ನೋಡುವುದೇ ಕಷ್ಟವಾದಾಗ
ಬಿಟ್ಟು ಬಿಡದೆ ಕಣ್ಣಿಗೆ ನೊರಜು ಈಸುವ ಹಾಗೆ
ದೃಷ್ಟಿಗೆ ತೀರಾ ಹತ್ತಿರ ಬಂದು ಹೋದೆ

ಮಾತೇ ಇಲ್ಲವೆನ್ನುವಾಗ
ಹಸಿವಿನಿಂದ ಅಂಬಾ ಎನುವ ಕರುವ ಹಾಗೆ
ಮೈಯೆಲ್ಲಾ ನೆಕ್ಕಿ ಹಾರೈಸಿ ಹೋದೆ

ಸುಳಿವೇ ಸಿಗದಿದ್ದಾಗ
ಗಾಳಿಯಲ್ಲಿ ಮಣ್ಣು ರೂಪು ಪಡೆಯುವ ಹಾಗೆ
ಸುತ್ತ ಸುಳಿದು ಸಂಭಾಳಿಸಿ ಹೋದೆ

ಏನೂ ಕೇಳದಿದ್ದಾಗ
ಕಿವುಡನಿಗೆ ದೇಹ ಭಾಷೆ ಸಂವಹಿಸುವ ಹಾಗೆ
ಆತ್ಮದ ಓಂಕಾರದಲಿ ಪಲ್ಲವಿಸಿ ಹೋದೆ

ಇಷ್ಟೆಲ್ಲ ಇರುವಾಗಲೂ
ನೀನು ನೀನಾಗಿಯೇ ಉಳಿದೆ

● ಕೃಷ್ಣ ದೇವಾಂಗಮಠ
ಕಲೆ: ಡಿ.ಕೆ. ರಮೇಶ್